ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 17–8–2017

# ಪತ್ರಿಕಾ ಆಮಂತ್ರಣ

1) ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ ವಿಜ್ಞಾನ ಪ್ರದರ್ಶನ

ಉದ್ಘಾಟನೆ:

ಪ್ರೊ. ಜಯವಂತ್ ಎಚ್. ಅರಕೇರಿ,
ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು

ದಿನಾಂಕ: 18–8–2017 ಶುಕ್ರವಾರ, ಸಮಯ: ಬೆಳಿಗ್ಗೆ 9–30 ಗಂಟೆಗೆ

ಸ್ಥಳ: ಜವಾಹರ್‌ಲಾಲ್ ನೆಹರು ತಾರಾಲಯ, ಶ್ರೀ ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು

2) 2013–18 ನೂತನ ಜವಳಿ ನೀತಿಯಡಿ ತರಬೇತಿ ನೀಡುತ್ತಿರುವ ಕೌಶಲ್ಯಾಭಿವೃದ್ಧಿ/ ಖಾಸಗಿ ತರಬೇತಿ ಕೇಂದ್ರಗಳ ತರಬೇತುದಾರರಿಗೆ ಒಂದು ದಿನದ ಪ್ರೇರಣಾ ಶಿಬಿರ

ಉದ್ಘಾಟನೆ: ಮತ್ತು ಅಧ್ಯಕ್ಷತೆ:
ಶ್ರೀ ಆರ್. ಗಿರೀಶ್, ಐ.ಎ.ಎಸ್.
ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ

ಮುಖ್ಯ ಅತಿಥಿಗಳು:
ವಿಜಯಕುಮಾರ್ ಜಿ. ನಿರಾಳೆ,
ಜವಳಿ ಅಭಿವೃದ್ಧಿ ಆಯುಕ್ತರ ಪತ್ರಾಂಕಿತ ಸಹಾಯಕರು

ದಿನಾಂಕ: 18–8–2017 ಶುಕ್ರವಾರ ಸಮಯ ಬೆಳಿಗ್ಗೆ 10–30 ಗಂಟೆಗೆ
ಸ್ಥಳ: ಫ್ರೆಂಡ್‌ಶಿಫ್ ಹಾಲ್, ವೈಎಂಸಿಎ, ನೃಪತುಂಗ ರಸ್ತೆ, ಬೆಂಗಳೂರು

# ಪತ್ರಿಕಾ ಪ್ರಕಟಣೆ

**64/64**

## ಒಂದು ದಿನದ ಪ್ರೇರಣಾ ಶಿಬಿರ

**ಬೆಂಗಳೂರು ಆಗಸ್ಟ್ 17(ಕರ್ನಾಟಕ ವಾರ್ತೆ)**

**ಕೈಮಗ್ಗ ಮತ್ತು ಜವಳಿ ಇಲಾಖೆ 2013-18 ನೂತನ ಜವಳಿ ನೀತಿಯಡಿ ತರಬೇತಿ ನೀಡುತ್ತಿರುವ ಕೌಶಲ್ಯಾಭಿವೃದ್ಧಿ/ಖಾಸಗಿ ತರಬೇತಿ ಕೇಂದ್ರಗಳ ತರಬೇತುದಾರರಿಗೆ ಒಂದು ದಿನದ ಪ್ರೇರಣಾ ಶಿಬಿರವನ್ನು ಹಮ್ಮಿಕೊಂಡಿದೆ.**

**ದಕ್ಷಿಣ ವಿಭಾಗದ ವ್ಯಾಪ್ತಿಯ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಮೈಸೂರು, ಮಂಡ್ಯ, ರಾಮನಗರ, ಕೋಲಾರ ಮತ್ತು ಮಡಿಕೇರಿ ಜಿಲ್ಲೆಗಳಲ್ಲಿ ತರಬೇತಿ ನೀಡುತ್ತಿರುವ ಕೌಶಲ್ಯಾಭಿವೃದ್ಧಿ/ಖಾಸಗಿ ಕೇಂದ್ರಗಳ ತರಬೇತುದಾರರಿಗೆ ದಿನಾಂಕ: 18-08-2017 ರಂದು ಶುಕ್ರವಾರ ಬೆಳಿಗ್ಗೆ 10:30 ಗಂಟೆಗೆ, ಫ್ರೆಂಡ್ ಶಿಪ್ ಹಾಲ್, ವೈಎಂಸಿಎ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ಒಂದು ದಿನದ ಪ್ರೇರಣಾ ಶಿಬಿರವನ್ನು ಏರ್ಪಡಿಸಲಾಗಿದೆ.**

**ಸದರಿ ಕಾರ್ಯಕ್ರಮವನ್ನು ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ,ಕೈಮಗ್ಗ ಮತ್ತು ಜವಳಿ ಇಲಾಖೆ, ಆರ್. ಗಿರೀಶ್, ಐಎಎಸ್, ಉದ್ಘಾಟಿಸಲಿದ್ದು, ಕೌಶಲ್ಯಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಬಗ್ಗೆ ಮಾಹಿತಿಯನ್ನು ನೀಡಲಿದ್ದಾರೆ.**

**65/65**

## ಬೇಕರಿ ತಂತ್ರಜ್ಞಾನ ತರಬೇತಿ

**ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ)**

**ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಆಸಕ್ತರಿಂದ ಹದಿನಾಲ್ಕು ವಾರದ ಬೇಕರಿ ಟೆಕ್ನಾಲಜಿ ತರಬೇತಿಗೆ ಅರ್ಜಿ ಆಹ್ವಾನಿಸಿದೆ.**

**ಅಭ್ಯರ್ಥಿಗಳು ಕನಿಷ್ಟ ಎಸ್.ಎಸ್.ಎಲ್.ಸಿ (ಹತ್ತನೇ ತರಗತಿ) ಪಾಸಾಗಿರಬೇಕು. ನಿಗದಿತ ಅರ್ಜಿ ಫಾರಂಗಳನ್ನು ರೂಪಾಯಿ 10-00 (ಹತ್ತು) ಸಂದಾಯಿಸಿ, ಬೇಕರಿ ತರಬೇತಿ ಕೇಂದ್ರ, ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು-560024, ಇಲ್ಲಿಂದ ಪಡೆದುಕೊಳ್ಳಬಹುದು.**

ಅರ್ಜಿಯನ್ನು ಪಡೆಯಲು ಹಾಗೂ ಭರ್ತಿಮಾಡಿದ ಅರ್ಜಿಯನ್ನು ಹಿಂದಿರುಗಿಸಲು ಕೊನೆಯ ದಿನಾಂಕ 28.08.2017 ರಂದು 4.00 ಘಂಟೆಯ ಒಳಗೆ, ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು–560024, ಈ ವಿಳಾಸಕ್ಕೆ ತಲುಪಿಸಬೇಕು.

ಹೆಚ್ಚಿನ ವಿವರಗಳಿಗೆ ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿವಿಶ್ವವಿದ್ಯಾನಿಲಯ, ಹೆಬ್ಬಾಳ ಇವರನ್ನು ಖುದ್ದಾಗಿ ಅಥವಾ ದೂರವಾಣಿಯ ಮೂಲಕ ಸಂಪರ್ಕಿಸಿ 080–23513370

66/66

## ವೀರಾಂಜನೇಯ ಸ್ವಾಮಿಗೆ ಬೆಣ್ಣೆ ಅಲಂಕಾರ

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ)

ನಗರದ ಮಹಾಲಕ್ಷ್ಮೀ ಬಡಾವಣೆಯಲ್ಲಿರುವ ಶ್ರೀ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಾಲಯವು ಕರ್ನಾಟಕ ಸರ್ಕಾರದ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ ಸೇರಿದ್ದು ದಿನಾಂಕ 19.08.2017ರಂದು ಶ್ರೀ ಸ್ವಾಮಿಗೆ 42ನೇ ವರ್ಷದ ಬೆಣ್ಣೆ ಅಲಂಕಾರ ಕಾರ್ಯಕ್ರಮವನ್ನು ಆಚರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

67/67

## ಸ್ವರ್ಣ ಗೌರಿ ಮತ್ತು ವರಸಿದ್ಧಿ ವಿನಾಯಕಸ್ವಾಮಿ ಮಹೋತ್ಸವ

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ)

ಬೆಂಗಳೂರು ನಗರ ಜಯನಗರದಲ್ಲಿರುವ ಶ್ರೀ ವಿನಾಯಕ ಸ್ವಾಮಿ ದೇವಾಲಯವು ಕರ್ನಾಟಕ ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ಹಿರಿಯ "ಘೋಷಿತ" ಸಂಸ್ಥೆಯಾಗಿರುತ್ತದೆ. ಸದರಿ ದೇವಾಲಯದಲ್ಲಿ ದಿನಾಂಕ: 24–08–2017 ರಿಂದ 30–08–2017ರ ವರೆಗೆ ಶ್ರೀ ಸ್ವರ್ಣಗೌರಿ ಮತ್ತು ವರಸಿದ್ಧಿ ವಿನಾಯಕಸ್ವಾಮಿ ಮಹೋತ್ಸವವನ್ನು ಆಚರಿಸಲಾಗುವುದು ಎಂದು ಎಂದು ಪ್ರಕಟಣೆ ತಿಳಿಸಿದೆ.

68/68

## ಮೂಲ ಸಾಕ್ಷರತೆಯಡಿ ಕಲಿತವರ ಪರೀಕ್ಷೆ

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮದಲ್ಲಿ ಮೂಲ/ಕ್ರಿಯಾತ್ಮಕ ಸಾಕ್ಷರತೆ ಪಡೆದವರ ಕಲಿಕಾ ಸಾಮರ್ಥ್ಯ ಅಳೆಯಲು ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರ ಮತ್ತು ರಾಷ್ಟ್ರೀಯ ಮುಕ್ತ ಶಾಲಾ ಸಂಸ್ಥೆ ಸಹಯೋಗದದಲ್ಲಿ ಆಗಸ್ಟ್ 20 ರಂದು ಪರೀಕ್ಷೆಯನ್ನು ಹಮ್ಮಿಕೊಳ್ಳಲಾಗಿದೆ.

ರಾಷ್ಟ್ರಾದ್ಯಂತ ಕರ್ನಾಟಕವೂ ಸೇರಿದಂತೆ ಸಾಕ್ಷರ ಭಾರತ್ ಕಾರ್ಯಕ್ರಮ ಅನುಷ್ಠಾನದಲ್ಲಿರುವ ಹೈದರಾಬಾದ್-ಕರ್ನಾಟಕ ಪ್ರದೇಶ ವ್ಯಾಪ್ತಿಯ 06 ಜಿಲ್ಲೆಗಳಲ್ಲಿ ನವಸಾಕ್ಷರರಿಗೆ ಪರೀಕ್ಷೆ ನಡೆಸಲಾಗುತ್ತಿದೆ.

ಆ ದಿನ ಕರ್ನಾಟಕ ರಾಜ್ಯದ ಬಳ್ಳಾರಿ, ಬೀದರ್, ಕೊಪ್ಪಳ, ರಾಯಚೂರು, ಕಲಬುರಗಿ ಮತ್ತು ಯಾದಗಿರಿ- ಈ ಜಿಲ್ಲೆಗಳ 913 ಗ್ರಾಮ ಪಂಚಾಯಿತಿಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮ ಸಂಸದರ ಆದರ್ಶ ಗ್ರಾಮ ಯೋಜನೆಯನಡಿ ಕಲಿತವರಿಗೆ ಮೌಲ್ಯಮಾಪನ ಪರೀಕ್ಷೆ ನಡೆಯುತ್ತದೆ. ಕರ್ನಾಟಕ ರಾಜ್ಯ ಸಾಕ್ಷರತಾ ಮಿಶನ್ ಪ್ರಾಧಿಕಾರವು ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿಗಳ ಮೂಲಕ ಸದರಿ ಪರೀಕ್ಷೆ ನಡೆಸುತ್ತದೆ. ರಾಜ್ಯದಲ್ಲಿ ಈ ಬಾರಿ ಸುಮಾರು 240450 ಜನ ನವಸಾಕ್ಷರರು ಈ ಪರೀಕ್ಷೆಗೆ ನೋಂದಾಯಿಸಿಕೊಳ್ಳುವವರಿದ್ದಾರೆ.

ಮೂಲ ಸಾಕ್ಷರತೆಯಡಿ ಕಲಿಕೆಯ ಮಟ್ಟ ಅಳೆಯುವುದು ಮತ್ತು ಕಲಿಕೆಯ ಮಟ್ಟದ ಸಾಧನೆಯನ್ನು ಪ್ರಮಾಣೀಕರಿಸುವುದರ ಮೂಲಕ ಗುರುತಿಸುವುದು ನವಸಾಕ್ಷರರ ಪರೀಕ್ಷೆಯ ಪ್ರಮುಖ ಉದ್ದೇಶವಾಗಿರುತ್ತದೆ.

ಲೋಕ ಶಿಕ್ಷಣ ಕೇಂದ್ರ ಪ್ರೇರಕರು ಗ್ರಾಮ ಪಂಚಾಯಿತಿಗಳಲ್ಲಿ, ಕಲಿತ ಅಭ್ಯರ್ಥಿಗಳ ನೋಂದಣಿ ಮಾಡುವರು. ಪರೀಕ್ಷೆಯ ದಿನದವರೆಗೆ ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ. ಮೌಲ್ಯಮಾಪನ ಪರೀಕ್ಷೆಯು 913 ಗ್ರಾಮ ಪಂಚಾಯಿತಿಗಳ ಕೇಂದ್ರ ಸ್ಥಳ ಮತ್ತು ಅದರ ವ್ಯಾಪ್ತಿಯ ಆಯ್ದ ಗ್ರಾಮಗಳ ಸರ್ಕಾರಿ ಹಿರಿಯ ಪ್ರಾಥಮಿಕ/ಪ್ರೌಢ ಶಾಲೆಗಳಲ್ಲಿ ನಡೆಸಲಾಗುತ್ತಿದೆ. ದಿನಾಂಕ : 20-08-2017ರಂದು ಬೆಳಿಗ್ಗೆ 10:00 ರಿಂದ ಸಂಜೆ 05.00 ರವರೆಗೆ ಪರೀಕ್ಷಾರ್ಥಿಗಳು ತಮಗೆ ಅನುಕೂಲವಾದ 3 ಗಂಟೆಗಳ ಕಾಲ ಪರೀಕ್ಷೆ ಬರೆಯಬಹುದಾಗಿದೆ.

ಪ್ರಶ್ನೆ ಪತ್ರಿಕೆ ಒಟ್ಟು 150 ಅಂಕಗಳಿಗೆ 3 ವಿಭಾಗಗಳಲ್ಲಿರುತ್ತದೆ. ಶೇ 60 ಮತ್ತು ಹೆಚ್ಚಿನ ಅಂಕಗಳು- ಎ ದರ್ಜೆ, 40% ರಿಂದ 60% ಅಂಕಗಳು- ಬಿ ದರ್ಜೆ, 40% ಕ್ಕಿಂತ ಕಡಿಮೆ ಅಂಕಗಳು -ಸಿ ದರ್ಜೆ ಆಗಿರುತ್ತದೆ.

ಮೂರು ವಿಭಾಗಗಳಲ್ಲಿ ಎ ಮತ್ತು ಬಿ ದರ್ಜೆ ಪಡೆದ ಅಭ್ಯರ್ಥಿಗಳು ಕಲಿಕೆ ಪೂರ್ಣಗೊಳಿಸಿದ್ದಾರೆಂದು ಪರಿಗಣಿಸಲಾಗುತ್ತದೆ. ಯಾವುದಾದರೂ ವಿಭಾಗದಲ್ಲಿ ಸಿ ದರ್ಜೆ ಪಡೆದ ಅಭ್ಯರ್ಥಿಗಳು ಆ ವಿಭಾಗದಲ್ಲಿ ಮಾತ್ರ ಪುನಃ ಪರೀಕ್ಷೆ ತೆಗೆದು ಕೊಳ್ಳಬಹುದು. ಪರೀಕ್ಷೆಯ ನಂತರ ಅರ್ಹ ಅಭ್ಯಥಿಗಳಿಗೆ **NLMA** ಮತ್ತು **NIOS** ಸಂಸ್ಥೆಯವರು ಜಂಟಿಯಾಗಿ ಪ್ರಮಾಣ ಪತ್ರ ನೀಡುವರು.

ನವಸಾಕ್ಷರರು ತಪ್ಪದೆ ಸದರಿ ಪರೀಕ್ಷೆಗೆ ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಕೇಂದ್ರದ ಪ್ರೇರಕರಲ್ಲಿ ನೋಂದಾಯಿಸಿಕೊಳ್ಳಲು ಹಾಗೂ ದಿನಾಂಕ 20-8-2017 ರಂದು ತಮಗೆ ನಿಗದಿಪಡಿಸಿರುವ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿ ಪರೀಕ್ಷೆ ತೆಗೆದುಕೊಳ್ಳಲು ಹಾಗೂ ಸಾಕ್ಷರ ಕರ್ನಾಟಕ ಉಂಟುಮಾಡುವಲ್ಲಿ ಭಾಗಿಗಳಾಗಲು ಪ್ರಕಟಣೆ ತಿಳಿಸಿದೆ.

**69/69**

## ಡೆಂಘಿ ಮತ್ತು ಚಿಕೂನ್‌ಗುನ್ಯ ನಿಯಂತ್ರಣ ಕ್ರಮ ಕೈಗೊಳ್ಳಲು ಸೂಚನೆ

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ)

ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ **Inter-Departmental Co-ordination** ಸಭೆಯಲ್ಲಿ ಸೂಚಿಸಿದಂತೆ, ಎಲ್ಲಾ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ಈ ವಾರದಲ್ಲಿ ಡೆಂಘಿ ಮತ್ತು ಚಿಕೂನ್‌ಗುನ್ಯ ನಿಯಂತ್ರಣದ ಬಗ್ಗೆ ಒಂದು ಜಿಲ್ಲಾ ಮಟ್ಟದ ಸಭೆ ಹಾಗೂ ಸಹಾಯಕ ಆಯುಕ್ತರುಗಳು ಉಪವಿಭಾಗಗಳಲ್ಲಿ ಮತ್ತು ಕಾರ್ಯನಿರ್ವಹಣಾಧಿಕಾರಿಗಳು ತಾಲ್ಲೂಕು ಮಟ್ಟದಲ್ಲಿ ಸಭೆಗಳನ್ನು ನಡೆಸಬೇಕಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಸ್ಥಳೀಯ ಆರೋಗ್ಯ ಕಾರ್ಯಕರ್ತರು ಮನೆಮನೆಗೆ ಭೇಟಿ ನೀಡಿ ಡೆಂಘಿ ಮತ್ತು ಚಿಕೂನ್‌ಗುನ್ಯ ಸೊಳ್ಳೆ ಉತ್ಪನ್ನವಾಗುವ ಜಾಗಗಳನ್ನು ಪರಿಶೀಲಿಸಿ ಅದನ್ನು ತಡೆಗಟ್ಟುವ ಕ್ರಮವನ್ನು ಜರುಗಿಸತಕ್ಕದ್ದು.

ಕಲ್ಲುಗಣಿ ಪ್ರದೇಶಗಳಲ್ಲಿ ನಿಂತ ನೀರಿನಲ್ಲಿ ಮೀನುಗಳನ್ನು ಬಿಡುವುದು, ಮನೆ ಹಾಗೂ ಶಾಲೆಗಳ ಸುತ್ತಮುತ್ತಲಿನಲ್ಲಿ ರಸ್ತೆ ಚರಂಡಿ ನೀರು ಮತ್ತು ಮಳೆನೀರು ನಿಂತಿದ್ದಲ್ಲಿ ಸ್ಪ್ರೇ ಹಾಗೂ ಚೆಂಡುಹೂವು ಗಿಡದ ಎಲೆಗಳು ಹಾಗೂ ಬೇವಿನೆಲೆಗಳ ಹೊಗೆಯನ್ನು ಹೊಡಿಸುವುದು

**Resident Welfare Association** ಗಳಿಗೆ ತಿಳುವಳಿಕೆ ನೀಡಿ ಅವರ ಸಹಯೋಗದೊಂದಿಗೆ ಮನೆಮನೆಗೆ ಭೇಟಿ ನೀಡಿ ಡೆಂಘಿಗೆ ಕಾರಣವಾಗುವ ಲಾರ್ವಾ ಸೊಳ್ಳೆಗಳನ್ನು ನಿರ್ಮೂಲನೆ ಮಾಡುವುದು. ಶಾಲೆ/ ಕಾಲೇಜು/ ವಿದ್ಯಾರ್ಥಿನಿಲಯ/ ಅಂಗನವಾಡಿಗಳಲ್ಲಿ ಡೆಂಘಿ ಜ್ವರದ ಬಗ್ಗೆ ಬೆಳಗಿನ ಸಭೆ **(assembly)** ಗಳ ಸಮಯದಲ್ಲಿ ತಿಳುವಳಿಕೆ ನೀಡುವುದು.

**3A's** ಅಂದರೆ ಎ.ಎನ್.ಎಂ.ಗಳು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರುಗಳಿಗೆ ಅವರ ಕಾರ್ಯಕ್ಷೇತ್ರದಲ್ಲಿ ಡೆಂಘಿ ಮತ್ತು ಚಿಕೂನ್‌ಗುನ್ಯ ಬಾರದಂತೆ ಮಾಡಿರುವವರಿಗೆ ರೂ.**200** ಪ್ರೋತ್ಸಾಹಧನವನ್ನು ನೀಡುವುದು. ಸಾರಿಗೆ ಇಲಾಖೆ ಮೂಲಕ ವಿಶೇಷವಾಗಿ ಡಿಪೋಗಳಲ್ಲಿನ ಖಾಲಿ ಟೈರ್‌ಗಳಲ್ಲಿ ನಿಂತಿರುವ ನೀರನ್ನು ತೆಗೆಸುವುದು ಹಾಗೂ ಟಾರ್ಪಲ್‌ಗಳನ್ನು ಹಾಕಿ, ತಕ್ಷಣ ಹರಾಜು/ವಿಲೇವಾರಿ ಮಾಡತಕ್ಕದ್ದು.

ನಗರಾಭಿವೃದ್ಧಿ ಇಲಾಖೆ ಮೂಲಕ ನಿರ್ಮಾಣ ಹಂತದ ಪ್ರದೇಶಗಳಲ್ಲಿ ನೀರು ನಿಲ್ಲುವುದನ್ನು ತಡೆಗಟ್ಟುವುದು. ಅದಕ್ಕಾಗಿ ಬಿ.ಬಿ.ಎಂ.ಪಿ. ಮಾದರಿಯಲ್ಲಿ ಬದಲಾಯಿಸಿ ಗುತ್ತಿಗೆದಾರರ ಮೇಲೆ ಜವಾಬ್ದಾರಿ ನಿಗದಿಪಡಿಸುವುದು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಮನೆಮನೆಗಳಿಗೆ ಭೇಟಿ ನೀಡಿ ತೆರೆದ ಕುಡಿಯುವ ನೀರಿನ ಪಾತ್ರೆಗಳ ಮುಚ್ಚಳವನ್ನು ಹಾಕಿಸುವುದು ಹಾಗೂ ಸಾರ್ವಜನಿಕ ನಲ್ಲಿಗಳಲ್ಲಿ ವ್ಯರ್ಥವಾಗಿ ಹರಿದುಹೋಗುವ ನೀರನ್ನು ತಡೆಯಲು ಆಗಾಗ್ಗೆ **waterman** ಮೂಲಕ ಪರಿಶೀಲನೆ ಮಾಡಿಸುವುದು.

ಖಾಸಗಿ ಆಸ್ಪತ್ರೆಗಳು ಸರ್ಕಾರವು ಸೂಚಿಸಿದ ಔಷಧಗಳನ್ನು ನೀಡುವ ನೀತಿಯನ್ನು ಅನುಸರಿಸುವುದು. ರಕ್ತಪರೀಕ್ಷೆಗಾಗಿ ಬಡರೋಗಿಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸದೇ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿಯೇ ಮಾಡುತ್ತಿರುವ ಬಗ್ಗೆ ಪ್ರಚಾರ ನೀಡುವುದು, ಅಲ್ಲದೆ ಖಾಸಗಿ ಆಸ್ಪತ್ರೆಗಳು ರಕ್ತ ಪರೀಕ್ಷೆಗೆ ರೂ. **250/-** ಕ್ಕಿಂತ ಹೆಚ್ಚು ಹಾಗೂ ರಕ್ತ ಹಾಗೂ ಇತರೆ ಪರೀಕ್ಷೆ ಸೇರಿ ರೂ. **500/-** ಗಳನ್ನು ಮೀರಿ ಪಡೆಯಬಾರದು. ತಪ್ಪಿದ್ದಲ್ಲಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆ ಅಧಿನಿಯಮದಡಿ ಶಿಸ್ತು ಕ್ರಮ ಜರುಗಿಸತಕ್ಕದ್ದು.

ರಕ್ತದ ಪ್ಲೇಟ್ಲೇಟ್‌ಗಳನ್ನು ನೀಡಲು ಜಿಲ್ಲಾ ಆಸ್ಪತ್ರೆಗಳಲ್ಲಿ ವ್ಯವಸ್ಥೆ ಮಾಡಲಾಗಿದೆ. ಅದು ಸರಿಯಾಗಿ ಜನರಿಗೆ ಸಿಗಲು ಪ್ರಚಾರ/ಮೇಲ್ವಿಚಾರಣೆ ಮಾಡುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಾಸನಪುರ ನೂತನ ಉಪ ಮಾರುಕಟ್ಟೆಯಲ್ಲಿ ವ್ಯಾಪಾರ ಪ್ರಾರಂಭ

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ)

ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟನ್ನು ಪ್ರಾರಂಭಿಸಿದ್ದು, ಈರುಳ್ಳಿ, ಆಲೂಗಡ್ಡೆ ಮತ್ತಿತರೆ ಕೃಷಿ ಹುಟ್ಟುವಳಿಗಳನ್ನು ಮಾರಾಟಕ್ಕಾಗಿ ತರುವ ರೈತಬಾಂಧವರು ನೇರವಾಗಿ ದಾಸನಪುರ ಉಪ ಮಾರುಕಟ್ಟೆಗೆ ತರಬೇಕೆಂದು ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್ಲಾ ವರ್ತಕರು, ದಲ್ಲಾಲರು, ಹಾಗೂ ಖರೀದಿದಾರರುಗಳು ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕೃಷಿ ಹುಟ್ಟುವಳಿಗಳನ್ನು ವಹಿವಾಟು ನಡೆಸುವುದು. ರೈತಬಾಂಧವರು, ಪೇಟೆಕಾರ್ಯಕರ್ತರು ಹಾಗೂ ಗ್ರಾಹಕರು ಕೃಷಿ ಹುಟ್ಟುವಳಿಗಳನ್ನು ಖರೀದಿಸಿ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಸುಗಮ ವ್ಯಾಪಾರ ವಹಿವಾಟು ನಡೆಯಲು ಸಹಕರಿಸಬೇಕು ಎಂದು ಹೇಳಿದ್ದಾರೆ.

ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ರಾಜ್ಯದ ಬೃಹತ್ ಮಾರುಕಟ್ಟೆಯಾಗಿರುತ್ತದೆ. ಈರುಳ್ಳಿ ಮತ್ತು ಆಲೂಗಡ್ಡೆ ಕೃಷಿ ಉತ್ಪನ್ನಗಳಿಗೆ ಕರ್ನಾಟಕದ ಅತಿ ದೊಡ್ಡ ಪ್ರಾಥಮಿಕ ಮಾರುಕಟ್ಟೆ ಆಗಿದ್ದು, ಪ್ರತಿ ವರ್ಷ ಸುಮಾರು 80 ಲಕ್ಷ ಕ್ವಿಂಟಾಲ್‌ಗಳಷ್ಟು ಈರುಳ್ಳಿ ಹಾಗೂ ಸುಮಾರು 27.44 ಲಕ್ಷ ಕ್ವಿಂಟಾಲ್‌ಗಳಷ್ಟು ಆಲೂಗಡ್ಡೆ ಆವಕವಾಗುತ್ತದೆ. ಸುಗ್ಗಿಯ ಸಮಯದಲ್ಲಿ ಪ್ರತಿ ದಿನ ಸುಮಾರು 1000 ರಿಂದ 3000 ಲಾರಿಗಳು ಪ್ರತಿದಿನ ಮಾರುಕಟ್ಟೆಗೆ ಈರುಳ್ಳಿ ಆಲೂಗಡ್ಡೆ ಕೃಷಿ ಉತ್ಪನ್ನಗಳನ್ನು ತುಂಬಿಕೊಂಡು ಮತ್ತು ಹೊರಸಾಗಿಸಲು ಬರುತ್ತಿದ್ದು, ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣವು ನಗರದ ಕೇಂದ್ರಭಾಗದಲ್ಲಿದ್ದು, ಭಾರಿ ವಾಹನಗಳಿಂದ ಸಂಚಾರ ದಟ್ಟಣೆಯುಂಟಾಗಿ ವ್ಯಾಪಾರ ವಹಿವಾಟಿಗೆ ಬಹಳ ಕಿಷ್ಕಿಂದೆಯಾಗಿರುತ್ತದೆ.

ಇದರಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುತ್ತದೆ. ಪ್ರಾಂಗಣದ ಆಕ್ಕಪಕ್ಕದಲ್ಲಿ ಖಾಸಗಿ ಕಂಪನಿಗಳು, ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಸಾವಿರಾರು ಜನರು ಕೆಲಸ ನಿರ್ವಹಿಸುತ್ತಿದ್ದು, ವಾಹನ ಸಂಚಾರ ದಟ್ಟಣೆಯಿಂದ ಹಲವಾರು ಅಪಘಾತಗಳು, ಸಾವುನೋವುಗಳು ಸಂಭವಿಸಿದ್ದು, ಸಾರ್ವಜನಿಕರಿಗೆ ಸಂಚಾರಕ್ಕೆ ಬಹಳ ತೊಂದರೆಯಾಗಿರುತ್ತದೆ.

ಈ ಎಲ್ಲಾ ಸಮಸ್ಯೆಗಳನ್ನು ಮನಗಂಡು ಸರ್ಕಾರವು ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ದಿ:17-04-2008ರಲ್ಲಿ 67.25 ಎಕರೆ ಸರ್ಕಾರಿ ಜಮೀನನ್ನು ದಾಸನಪುರ ಉಪ ಮಾರುಕಟ್ಟೆ ಸ್ಥಾಪನೆಗಾಗಿ ಮಂಜೂರು ಮಾಡಿದೆ. ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ದಿನಾಂಕ: 26-08-2008ರಂದು ಜಮೀನನ್ನು ಸ್ವಾಧೀನಕ್ಕೆ ಪಡೆದು, ಪ್ರಾಂಗಣವನ್ನು 5 ಬ್ಲಾಕ್ ಗಳಾಗಿ ವಿಂಗಡಿಸಿ ರೂ. 220.00ಕೋಟಿ ವೆಚ್ಚದಲ್ಲಿ ವಿವಿಧ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಅಭಿವೃದ್ಧಿಪಡಿಸಿರುತ್ತದೆ.

ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ **ಎ-ಬ್ಲಾಕ್‌ನ** 14.1 ಗುಂಟೆ ಜಮೀನಿನಲ್ಲಿ ವಿವಿಧ ಅಳತೆಯ 80ಸಂಖ್ಯೆ ಅಂಗಡಿ-ವ-ಗೋದಾಮುಗಳನ್ನು. 21 ಸಂಖ್ಯೆ ಸಣ್ಣ ಮಳಿಗೆಗಳನ್ನು, 4 ಸಂಖ್ಯೆ (40*200 ಅಡಿ ಅಳತೆಯ) ಮುಚ್ಚಿದ ಹರಾಜುಕಟ್ಟೆಗಳನ್ನು, ವೇಬ್ರಿಡ್ಜ್, ಸಾಮಾನ್ಯ ಶೌಚಾಲಯಗಳು, ಉಪಹಾರ ಗೃಹಗಳು, ಕೊಳವೆ ಬಾವಿಗಳು, ಸೀವೆಜ್ ಟ್ರೀಟ್‌ಮೆಂಟ್ ಪ್ಲಾಂಟ್, ಮಳೆ ನೀರು ಕೊಯ್ಲು ವ್ಯವಸ್ಥೆ, 100 ಅಡಿ ಅಗಲದ ಕಾಂಕ್ರೀಟ್ ರಸ್ತೆಗಳು, ವಿದ್ಯುದ್ದೀಕರಣ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ **ಬಿ-ಬ್ಲಾಕ್‌ನ** 18.24ಗುಂಟೆ ಜಮೀನಿನಲ್ಲಿ ವಿವಿಧ ಅಳತೆಯ 132 ಸಂಖ್ಯೆ ಅಂಗಡಿ-ವ-ಗೋದಾಮುಗಳನ್ನು, 07 ಸಂಖ್ಯೆ ಸಣ್ಣ ಮಳಿಗೆಗಳನ್ನು, 2 ಸಂಖ್ಯೆ (40*400 ಅಡಿ ಅಳತೆಯ) ಮುಚ್ಚಿದ ಹರಾಜುಕಟ್ಟೆಗಳನ್ನು, ವಿದ್ಯುದ್ದೀಕರಣ ವ್ಯವಸ್ಥೆ, ವೇಬ್ರಿಡ್ಜ್, ಸಾಮಾನ್ಯ ಶೌಚಾಲಯಗಳು, ಉಪಹಾರ ಗೃಹಗಳು, ಕೊಳವೆ ಬಾವಿಗಳು, ಸೀವೆಜ್ ಟ್ರೀಟ್‌ಮೆಂಟ್ ಪ್ಲಾಂಟ್, ಮಳೆ ನೀರು ಕೊಯ್ಲು ವ್ಯವಸ್ಥೆ, 100 ಅಡಿ ಅಗಲದ ಕಾಂಕ್ರೀಟ್ ರಸ್ತೆಗಳು, ಓವರ್‌ಹೆಡ್ ಟ್ಯಾಂಕ್, ನೀರಿನ ಸಂಪ್, ಘನತ್ಯಾಜ್ಯ ವಿಲೇವಾರಿ ಘಟಕ, ಕಲ್ಪಿಸಲಾಗಿರುತ್ತದೆ.

ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಸಿ-ಬ್ಲಾಕ್‌ನ 14.9ಗುಂಟೆ ಜಮೀನಿನಲ್ಲಿ ಆರ್.ಕೆ.ವಿ.ವೈ ಯೋಜನೆಯಡಿಯಲ್ಲಿ 1000 ಮೆಟ್ರಿಕ್ ಟನ್ ಸಾಮರ್ಥ್ಯದ ಶೀಥಲ ಗೃಹ ಹಾಗೂ ಇರ್ರಾಡಿಯೇಷನ್ ಘಟಕ ನಿರ್ಮಿಸಲು ಕ್ರಮ ವಹಿಸಲಾಗಿದೆ. ರಸ್ತೆ ಹಾಗೂ ಬೃಹತ್ ಮಳೆ ನೀರು ಕಾಲುವೆ (ಸ್ಟಾರ್ಮ್ ವಾಟರ್ ಡ್ರೈನೇಜ್), ನಿರ್ಮಿಸಿದೆ. ಇದರ ಜೊತೆಗೆ ಬಾಕಿ ಉಳಿದಿರುವ ಜಮೀನಿನಲ್ಲಿ ವಿವಿಧ ಅಳತೆಯ 120 ನಿವೇಶನಗಳನ್ನು ಅರ್ಹ ಪೇಟೆಕಾರ್ಯಕರ್ತರಿಗೆ ಹಂಚಿಕೆ ಮಾಡಲು ವಿಂಗಡಿಸಲಾಗಿದೆ.

ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ **ಡಿ-ಬ್ಲಾಕ್‌ನ** 3.16 ಗುಂಟೆ ಜಮೀನಿನಲ್ಲಿ ಆಡಳಿತ ಕಚೇರಿ, ಪೋಲೀಸ್ ಸ್ಟೇಷನ್, ರೈತಭವನ, ಬ್ಯಾಂಕ್, ಅಂಚೆಕಛೇರಿ, ಕೊಳವೆ ಬಾವಿಗಳು, ಕಾಂಕ್ರೀಟ್ ಚರಂಡಿ ಮತ್ತು ಕಾಂಕ್ರೀಟ್ ರಸ್ತೆಗಳು, ಮಳೆನೀರು ಕೊಯ್ಲು ವ್ಯವಸ್ಥೆ,

ವಿದ್ಯುದ್ದೀಕರಣ, ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿರುತ್ತದೆ. ಇದಲ್ಲದೆ ಅತಿಥಿಗೃಹ, ಸಿಬ್ಬಂದಿ ವಸತಿಗೃಹಗಳನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ.

ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ <u>ಇ-ಬ್ಲಾಕ್‌ನ</u> 17.15 ಗುಂಟೆ ಜಮೀನಿನಲ್ಲಿ ಸುಸಜ್ಜಿತ ತರಕಾರಿ ಮಾರುಕಟ್ಟೆ ನಿರ್ಮಿಸಲಾಗುತ್ತಿದೆ. ಕೊಳವೆ ಬಾವಿಗಳು, ಕಾಂಕ್ರೀಟ್ ಚರಂಡಿ ಮತ್ತು ಕಾಂಕ್ರೀಟ್ ರಸ್ತೆಗಳು, ಬೃಹತ್ ಮಳೆ ನೀರು ಕಾಲುವೆ (ಸ್ಟಾರ್ಮ್ ವಾಟರ್ ಡ್ರೈನೇಜ್), ವಿದ್ಯುದ್ದೀಕರಣ, ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿರುತ್ತದೆ. ಇದರ ಜೊತೆಗೆ ಬಾಕಿ ಉಳಿದಿರುವ ಜಮೀನಿನಲ್ಲಿ ಅಂಗಡಿ-ವ-ಗೋದಾಮುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ.

ದಾಸನಪುರ ಉಪ ಮಾರುಕಟ್ಟೆಯ ಪೂರ್ಣ ವಿಸ್ತೀರ್ಣದ ಜಮೀನಿಗೆ ಕಲ್ಲು ಕಟ್ಟಡದ ಸುತ್ತುಗೋಡೆಯನ್ನು ಹಾಗೂ ಅಂಗಡಿಗಳ ಮುಂಭಾಗದಲ್ಲಿ ಬಿಸಿಲು ತಡೆ ಮೇಲ್ಹಾವಣಿಗಳನ್ನು ಅಳವಡಿಸಲಾಗಿರುತ್ತದೆ.

ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ವ್ಯಾಪಾರ ವಹಿವಾಟು ಸ್ಥಳಾಂತರಿಸುವ ಕುರಿತು ದಿನಾಂಕ:29-11-2012ರಿಂದ ವಿವಿಧ ದಿನಾಂಕಗಳಂದು ಮಾನ್ಯ ಕೃಷಿ ಮಾರುಕಟ್ಟೆ ಸಚಿವರು, ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು, ಹಾಗೂ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು, ಇವರ ಅಧ್ಯಕ್ಷತೆಯಲ್ಲಿ ಸರ್ಕಾರದ ಹಂತದಲ್ಲಿ ಮತ್ತು ಸಮಿತಿಯ ಹಂತದಲ್ಲಿ ಹಲವಾರು ಸಭೆಗಳು ನಡೆದಿದ್ದು, ಈ ಸಭೆಗಳಲ್ಲಿ ಕೈಗೊಂಡ ತೀರ್ಮಾನದನ್ವಯ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿರುತ್ತದೆ. ದಿನಾಂಕ:27.04.2015ರ ಸರ್ಕಾರದ ಆದೇಶ ಸಂಖ್ಯೆ:ಸಇ/353/ಎಂಆರ್‌ಇ/2014ರನ್ವಯ ಹಾಗೂ ದಿ:14-9-2016ರ ಆದೇಶದನ್ವಯ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ ಮಳಿಗೆಗಳನ್ನು ರಿಯಾಯಿತಿ ದರದಲ್ಲಿ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಆಧಾರದ ಮೇಲೆ ಅರ್ಹ ಪೇಟೆ ಕಾರ್ಯಕರ್ತರಿಗೆ ನಿಯಮಾನುಸಾರ ಪ್ರಕಟಣೆ ಮೂಲಕ ಹಂಚಿಕೆಗೆ ಅರ್ಜಿಗಳನ್ನು ಆಹ್ವಾನಿಸಿ ಅಂಗಡಿ-ವ-ಮಳಿಗೆಗಳನ್ನು ಹಂಚಿಕೆ ಮಾಡಿ ಸ್ವಾಧೀನಕ್ಕೆ ನೀಡಲಾಗಿರುತ್ತದೆ.

ದಿನಾಂಕ:18-08-2017ರಿಂದ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ವ್ಯಾಪಾರ ವಹಿವಾಟನ್ನು ಸ್ಥಳಾಂತರಿಸಲು ನಿರ್ಧರಿಸಲಾಗಿದೆ. ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಈಗಾಗಲೇ ಮಳಿಗೆಗಳನ್ನು ಹಂಚಿಕೆ ಪಡೆದಿರುವವರ ಜೊತೆಗೆ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮಹಡಿಗಳಲ್ಲಿ ಪರವಾನಗಿ ಪಡೆದು ಪಾದಚಾರಿ ರಸ್ತೆಗಳಲ್ಲಿ, ರಸ್ತೆ ಬದಿಯಲ್ಲಿ, ಹರಾಜುಕಟ್ಟೆಗಳಲ್ಲಿ ವ್ಯಾಪಾರ ಮಾಡುವ ವರ್ತಕ/ದಲ್ಲಾಲರುಗಳ ವ್ಯಾಪಾರ ವಹಿವಾಟನ್ನು ಸ್ಥಳಾಂತರಿಸಿದೆ. ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕೆ ಬರುವಂತಹ ಎಲ್ಲಾ

ಈರುಳ್ಳಿ ಆಲೂಗಡ್ಡೆ ವಾಹನಗಳು ರಾಜ್ಯದ ಉತ್ತರ ಕರ್ನಾಟಕ ಭಾಗದ ಹಾಗೂ ವಿವಿಧ ಜಿಲ್ಲೆಗಳಿಂದ ಮತ್ತು ಮಹಾರಾಷ್ಟ್ರ, ಇತರೆ ಹೊರರಾಜ್ಯಗಳಿಂದ ರಾಷ್ಟ್ರೀಯ ಹೆದ್ದಾರಿ-4 ರ ಮೂಲಕ ಬರುವುದರಿಂದ ಸಮೀಪದ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ ತನಿಖಾ ಠಾಣೆಗಳಲ್ಲಿ ಪರಿಶೀಲಿಸಿಕೊಂಡು, ರಹದಾರಿ ಪಡೆದು ಸಂಬಂಧಿಸಿದ ಅಂಗಡಿಗಳಲ್ಲಿ ವ್ಯಾಪಾರ ವಹಿವಾಟು ನಡೆಸಲು ತಿಳಿಸಲಾಗಿದೆ.

**71/71**

# ಸ್ವಚ್ಛಥಾನ್ –1.0– ಸ್ವಚ್ಛತಾ ಹ್ಯಾಕಥಾನ್

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ)

ಸ್ವಚ್ಛ ಭಾರತ್ ಮಿಷನ್ ಯೋಜನೆಯ ಯಶಸ್ವಿ ಅನುಷ್ಠಾನ ಮಾಡುವಲ್ಲಿ ಸಾರ್ವಜನಿಕರಿಂದ ಮತ್ತು ಸಂಸ್ಥೆಗಳಿಂದ ಮಾರ್ಗದರ್ಶನಗಳನ್ನು ಪಡೆಯುವ ಸಲುವಾಗಿ ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಮಂತ್ರಾಲಯವು ಆಗಸ್ಟ್ 2 ರಿಂದ 25 ರವರೆಗೆ ಸ್ವಚ್ಛಥಾನ್ –1.0– ಸ್ವಚ್ಛತಾ ಹ್ಯಾಕಥಾನ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಸ್ವಚ್ಛಥಾನ್ –1.0– ಸ್ವಚ್ಛತಾ ಹ್ಯಾಕಥಾನ್ ಯಶಸ್ವಿಗೆ ಸ್ವಸಹಾಯ ಸಂಘಗಳು, ಶಾಲಾ ಶಿಕ್ಷಣ ಸಂಸ್ಥೆಗಳು ಸೇರಿದಂತೆ ನೈರ್ಮಲ್ಯ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಪರಿಣಿತರು ಸಂಸ್ಥೆಗಳಿಂದ ಯಶಸ್ವಿ ಅನುಷ್ಠಾನಕ್ಕೆ ವಿನೂತನ ಕಾರ್ಯತಂತ್ರ, ತಾಂತ್ರಿಕ ವಿಧಾನಗಳು ಹಾಗೂ ಯೋಜನೆಯನ್ನು ನಿರಂತರವಾಗಿ ಮೇಲ್ವಿಚಾರಣೆ ನಡೆಸಲು ಅನುವಾಗುವಂತೆ ಸಲಹೆ ಮತ್ತು ಮಾರ್ಗದರ್ಶನಗಳನ್ನು ಪಡೆಯುವುದು ಮುಖ್ಯ ಉದ್ದೇಶವಾಗಿದೆ.

ರಾಜ್ಯದಲ್ಲಿ ಸ್ವಚ್ಛಥಾನ್ –1.0– ಸ್ವಚ್ಛತಾ ಹ್ಯಾಕಥಾನ್ ಕಾರ್ಯಕ್ರಮದ ಉದ್ಘಾಟನೆ ರಾಜ್ಯದಲ್ಲಿ ಆಗಸ್ಟ್ 17 ರಂದು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ.